ಇಂದು ದಿನಾಂಕ:08.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. ಎಸ್.ಎಂ.ಪಿ.ವಕೀಲರಿಂದಃ

ಈ ದಾವೆಯನ್ನು ನಾಗರಾಜು ಎಂಬುವರು ಒಬ್ಬರೇ ನನ್ನ ಮತ್ತು ತಿಮ್ಮೇಗೌಡ ಎಂಬುವರ ವಿರುದ್ಧ ಹಾಕಿರುತ್ತಾರೆ. 1 ನೇ ಪ್ರತಿವಾದಿ ಬದುಕಿದ್ದಾರೆ. 1 ನೇ ಪ್ರತಿವಾದಿಯ ಹೆಂಡತಿಯ ಹೆಸರು ಯಲ್ಲಮ್ಮ ಎಂದರೆ ಸರಿಯಲ್ಲ ಲಕ್ಷ್ಮಮ್ಮ. 1 ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರು. ಅವರಲ್ಲಿ ಮೊದಲನೆ ಹೆಂಡತಿ ಲಕ್ಷ್ಮಮ್ಮ ಎರಡನೆ ಹೆಂಡತಿ ಶಿವಮ್ಮ, ಸದರಿ ಲಕ್ಷ್ಮಮ್ಮ ಮತ್ತು ಶಿವಮ್ಮ ಬದುಕಿದ್ದಾರೆ. ಸದರಿ ಲಕ್ಷ್ಮಮ್ಮರವರಿಗೆ ವಾದಿಗಳು 3 ಜನ ಮಕ್ಕಳು ಎಂದರೆ ಸರಿಯಲ್ಲ, 1 ನೇ ವಾದಿ ನಾಗರಾಜು ಒಬ್ಬರೆ ಮಗ. ಈ ಕೇಸನ್ನು ನಾಗರಾಜು, ಅಕ್ಕಯಮ್ಮ ಮತ್ತು ನಾಗರತ್ನ ಮೂರು ಜನರು ಹಾಕಿದ್ದಾರೆ ಎಂದರೆ ಸರಿಯಲ್ಲ, ನಾಗರಾಜು ಒಬ್ಬರೇ ಹಾಕಿದ್ದಾರೆ. ಶಿವಮ್ಮನವರಿಗೆ ಗೋವಿಂದೇಗೌಡ ಮತ್ತು ಜಯಲಕ್ಷ್ಮೀ ಎಂದರೆ ನಾನು ಇಬ್ಬರೇ ಮಕ್ಕಳು. ಗೋವಿಂದೇಗೌಡರು ತೀರಿಕೊಂಡಿದ್ದಾರೆ ಅವರಿಗೆ ಮೂರು ಜನ ಮಕ್ಕಳು. ವಿಭಾಗ ಪತ್ರವನ್ನು ಹಾಕಿದ್ದೇನೆ. ವಿಭಾಗ ಪತ್ರ ಆಗಿರುವ ನಿಖರ ದಿನಾಂಕ ಗೊತ್ತಿಲ್ಲ 1989 ರಲ್ಲಿ ಆಗಿದೆ. ವಿಭಾಗ ಪತ್ರದಲ್ಲಿ ತಿಮ್ಮಮ್ಮ ಮತ್ತು ತಿಮ್ಮೇಗೌಡ ಇಬ್ಬರೇ ಪಕ್ಷಗಾರರು. ನೊಂದಣಿ ವಿಭಾಗ ಪತ್ರಕ್ಕೆ ಲಕ್ಷ್ಮಮ್ಮ ಮತ್ತು ನಾಗರಾಜುರವರು ಸಹಿ ಮಾಡಿದ್ದಾರೆ. ಅವರಿಬ್ಬರು ವಿಭಾಗ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ವಾದಿಗಳು ಸಹ ವಿಭಾಗ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಅವರು ನನಗೆ ಗೊತ್ತಿಲ್ಲ. ಯಾವ ಯಾವ ಜಮೀನಿನ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ವಿಭಾಗ ಪತ್ರ ಆಗಿದೆ ಎಂದರೆ ಗೊತ್ತಿಲ್ಲ. ಈ ಕೇಸನ್ನು ಯಾವ ಯಾವ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ಹಾಕಿದ್ದಾರೆ ಎಂದು ಗೊತ್ತಿಲ್ಲ. ತಿಮ್ಮೇಗೌಡರಿಗೆ ಒಟ್ಟಾಗಿ ಎಷ್ಟು ಎಕರೆ ಜಮೀನು ಇದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಗಳು ವಾದಿಗಳಿಗೆ ವಿಭಾಗ

ಆಗಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ತಿಮ್ಮೇಗೌಡರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ, ತಿಮ್ಮಮ್ಮನ ಸ್ವಯಾರ್ಜಿತ ಆಸ್ತಿ. ತಿಮ್ಮಮ್ಮನ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿದ್ದೇನೆ. ನ್ಯಾಯಾಲಯಕ್ಕೆ ನಾನು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿರುವ ವಿಷಯಗಳು ಗೊತ್ತಿವೆ. ನನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಗಳು ತಿಮ್ಮಮ್ಮನ ಸ್ವಯಾರ್ಜಿತ ಆಸ್ತಿಗಳು ಎಂದು ಬರೆಸಿದ್ದೇವೆ. ದಾವಾ ಆಸ್ತಿಗಳು ತಿಮ್ಮೇಗೌಡರ ಸ್ವಯಾರ್ಜಿತ ಆಸ್ತಿಗಳಾಗಿರುವುದರಿಂದ ಅದರಲ್ಲಿ ವಾದಿಗಳಿಗೂ ಸಮವಾದ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳಿಗೆ ಇರುವ ಹಕ್ಕು ತಪ್ಪಿಸಲು ಸುಳ್ಳು ಲಿಖಿತ ಹೇಳಿಕೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗಾಗಲೀ, ಗೋವಿಂದೇಗೌಡರಿಗಾಗಲೀ ಅಥವಾ ಅವರ ಹೆಂಡತಿ ಮಕ್ಕಳಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವಿಭಾಗ ಪತ್ರಕ್ಕೆ ವಾದಿಗಳಾಗಲೀ ಅವರ ಸಹೋದರರಾಗಲೀ ಸಹಿ ಮಾಡಿಲ್ಲ ಎಂದರೆ ಸುಳ್ಳು. ನಾನು ಹಾಜರುಪಡಿಸಿರುವ ವಿಭಾಗ ಪತ್ರ ವಾದಿಗಳನ್ನು ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಲಪಟಾಯಿಸಲು ದಿನಾಂಕ 05.09.2018 ರಂದು ದಾನ ಪತ್ರ ಬರೆಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾನ ಪತ್ರ ಬರೆಯಲು ತಿಮ್ಮೇಗೌಡರಿಗೆ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ಅನ್ಯತಾ ಹಿಸ್ಸೆ ಪಡೆಯಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಬರೆಸಿದ್ದೇನೆ. ನನ್ನ ಪ್ರಮಾಣ ಪತ್ರವು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

DW-01

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೆ.ಕೆ.ಸರಿ ಇದೆ.

ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.
ಪಿರಿಯಾಪಟ್ಟಣ